ದಿನಾಂಕ 16.07.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ **<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. MM ವಕೀಲರಿಂದ:</u>**

ನಾನು ಮತ್ತು ನನ್ನ ಅಣ್ಣ ಇಬ್ಬರೂ ಬೆಂಗಳೂರಿನಲ್ಲಿರುವ ಆಸ್ಪತ್ರೆಗೆ ಹೋಗಿ ಸಂಬಂಧಿಕಾರ ಮನೆಯಲ್ಲಿ ವಾಸವಾಗಿರುವುದಾಗಿ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೀರಿ ಈ ಸಂಬಂಧ ದಾಖಲಾತಿಗಳನ್ನು ನೀಡಿರುತ್ತೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕ, ತಿಂಗಳು , ವರ್ಷದಲ್ಲಿ ಪ್ರತಿವಾದಿ ನೀವಿಲ್ಲದ ಸಮಯದಲ್ಲಿ ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ದಿನಾಂಕ ನೆನಪಿಲ್ಲ , 2021 ರಲ್ಲಿ ಎಂದು ನುಡಿಯುತ್ತಾರೆ.

ಪ್ರತಿವಾದಿ ಅವರ ಸ್ವತ್ತಿನಲ್ಲಿ 2 ಅಂತಸ್ತಿನ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ . ಆ ರೀತಿ ಮನೆ ಕಟ್ಟಲು ಕನಿಷ್ಟ 2 ವರ್ಷ ಬೇಕು ಎಂದರೆ ಸರಿ . ಪ್ರತಿವಾದಿ ಮನೆ ಕಟ್ಟುತ್ತಿದ್ದಾರೆ ಎಂದು ನಿಮಗೆ ಯಾರಾದರೂ ತಿಳಿಸಿದ್ದಾರಾ ಎಂದರೆ ಸಾಕ್ಷಿದಾರರು ಹೌದು ಊರಿನಲ್ಲಿ ಇರುವವರು ಹೇಳಿರುವುದಾಗಿ ನುಡಿಯುತ್ತಾರೆ. ಅವರ ಹೆಸರು ನನ್ನ ಅಣ್ಣನ ಮಗ ಶರತ್ . ಸದರಿ ವಿಷಯವನ್ನು ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ . ಈ ಸಂಬಂದ , ಪೋಲಿಸರ ಬಳಿ ದೂರು ನೀಡಿರುತ್ತೇವೆ. ಆ ಸಂಬಂಧ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ . O.S. 512/2016 ಬಾಕಿ ಇತ್ತು , ಆ ಸಂಬಂಧ ದಾಖಲಾತಿ ಸಲ್ಲಿಸಿರುವುದಿಲ್ಲ ಎಂದರೆ ಸರಿ . ನೇರವಾಗಿ ನೀವು ಈ ದಾವೆಯನ್ನು ಹಾಕಿರುತ್ತೀರಿ ಎಂದರೆ ಸರಿ .

ಪ್ರತಿವಾದಿ ನಿಮಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಿ ಮನೆ ಕಟ್ಟಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿದಾರರು ಪ್ರತಿವಾದಿ 42 ಅಡಿ ಜಾಗ ಹೊಂದಿದ್ದು , 46 ಅಡಿ ಯಲ್ಲಿ ಕಟ್ಟಿರುವುದಾಗಿ ನುಡಿಯುತ್ತಾರೆ. ನೀವು ಆ

ಸಂಬಂಧ ಯಾವುದೇ ದಾಖ್ಲಾತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕ , ತಿಂಗಳು ಪಂಚಾಯಿತಿ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಪಂಚಾಯಿತಿದಾರರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳಲ್ಲಿ ಎಲ್ಲಿಯೂ ಸಹ ವಿಸ್ತೀರ್ಣ ನಮೂದಾಗಿಲ್ಲ ಎಂದರೆ ಸರಿಯಲ್ಲ. ಪೂರ್ವ ಪಶ್ಚಿಮ 39 ಅಡಿ , ಉತ್ತರ ದಕ್ಷಿಣ 130 ಅಡಿ ಸ್ವತ್ತಿನ ಮಾಲೀಕ ನಾನು ಎಂದು ಘೋಷಣೆ ಮಾಡುವಂತೆ ನಾನು ನ್ಯಾಯಾಲಯದಲ್ಲಿ ಕೇಳಿರುವುದಿಲ್ಲ ಎಂದರೆ ಸರಿ . ನೀವು ಮತ್ತು ಪ್ರತಿವಾದಿಗಳು ಅಕ್ಕ ಪಕ್ಕದ ಮನೆಯವರಾಗಿರುತ್ತೀರಿ ಎಂದರೆ ಸರಿ . ನೀವು ಸದರಿ ಸ್ವತ್ತನ್ನು ಖರೀದಿ ಮಾಡುವಾಗ ಹಾಗೂ ಪ್ರತಿವಾದಿಯ ಸ್ವತ್ತನ್ನು ಖರೀದಿ ಮಾಡುವಾಗ ಎರಡೂ ಸ್ವತ್ತುಗಳ ಮೇಲೆ ಒಂದೇ ಛಾವಡಿ ಇತ್ತು ಎಂದರೆ ಸಾಕ್ಷಿದಾರರು ನಮ್ಮ ಗೋಡೆಗೆ ಅವರ ಛಾವಡಿಯನ್ನು ತಂದು ಸೇರಿಸಿರುವುದಾಗಿ ನುಡಿಯುತ್ತಾರೆ.

ನಿಮ್ಮ ಮತ್ತು ಪ್ರತಿವಾದಿಯ ಎರಡೂ ಮನೆಗಳು ನಾಟಿ ಹೆಂಚಿನ ಮನೆಯಾಗಿತ್ತು ಎಂದರೆ ಸರಿ . ನೀವಿಬ್ಬರೂ ಮಾತನಾಡಿಕೊಂಡು ಪ್ರತಿವಾದಿಗಳು ಅವರ ಛಾವಡಿಯನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಜೊತ ಮಾತನಾಡಿ ಪ್ರತಿವಾದಿ ಸದರಿ ಛಾವಡಿಯನ್ನು ನಾಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಛಾವಡಿಯನ್ನು ನಾಶ ಮಾಡುವಾಗ ನಿಮ್ಮ ಗೋಡೆಯನ್ನು ಅವರು ಮುಟ್ಟಿರುವುದಿಲ್ಲ ಎಂದರೆ ಸರಿ . ನೀವು ಈಗ ಮನೆಯ ಮೇಲಿನ ನಾಟಿ ಹೆಂಚನ್ನು ತೆಗೆದು ಶೀಟ್ ಹಾಕಿರುತ್ತೀರಿ ಎಂದರೆ ಸರಿ . ಈಗಲೂ ಸಹ ನಿಮ್ಮ ಮನೆ ಹಳೆಯ ಗೋಡೆಯ ಮೇಲೆ ಛಾವಡಿ ನಿಂತಿದೆ ಎಂದರೆ ಸರಿಯಲ್ಲ. ನಿಮ್ಮ ಮನೆಯ ಗೋಡೆಯಿಂದ ಪ್ರತಿವಾದಿ ಮನೆಯ ಗೋಡೆವರೆಗಿನ ಖಾಲಿ ಜಾಗ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಪ್ರತಿವಾದಿ ಮನೆ ಕಟ್ಟುವಾಗ ತಿರುಗಾಡಲು ಜಾಗ ಬಿಟ್ಟುಕೊಂಡು ಕಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು 42 ಅಡಿ ಜಾಗ ಅವರಿಗಿದ್ದು 46 ಅಡಿ ಕಟ್ಟಿರುವುದಾಗಿ ನುಡಿಯುತ್ತಾರೆ. ನೀವು ನಿಮ್ಮ ಜಾಗವನ್ನು ಬಿಟ್ಟು ಪ್ರತಿವಾದಿ ಜಾಗದಲ್ಲಿ ಕಾಂಪೌಂಡ್ ಅನ್ನು ಕಟ್ಟಿ ನನಗೆ ಸೇರಿದ್ದು ಎಂದು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ನೀವು ಕಾಂಪೌಂಡ್ ಕಟ್ಟುವಾಗ ತಡೆ ಹಿಡಿದಿರುತ್ತಾರೆ

ಎಂದರೆ ಸರಿಯಲ್ಲ. ಆ ಸಮಯದಲ್ಲಿ ಇಬ್ಬರೂ ಸೇರಿ ಪೋಲಿಸ್ ಠಾಣೆಗೆ ಹೋಗಿರುತ್ತೀರಿ ಎಂದರೆ ಸರಿ . ಪೋಲಿಸರು ಅಳತೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಳತೆ ಮಾಡಲು ನಿಮ್ಮ ಅಣ್ಣ ಒಪ್ಪಿ ಕೊಂಡಿದ್ದು , ಅಳತೆಯೂ ಸಹ ಆಯಿತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನೀವು 6*50 ಅಡಿ ಒತ್ತುವರಿ ಮಾಡಿ ಕಾಂಪೌಂಡ್ ಕಟ್ಟಿರುವ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ.

**ವಾಟೀ ಸವಾಲಿಗೆ ಸಮಯಾವಕಾಶ ಕೋರಿದು ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ